ಒಂದೊಂದು ಜಾಗ ಹುಡುಕಿಕೊಂಡೆವು. ದೀಪಕ್ ಮಾತ್ರ 'ನಾನು ನಿಂತೇ ಇರುತ್ತೇನೆ' ಎಂದು ನಮಗಿಂತ ತುಸು ಎತ್ತರದ ದಿಣ್ಣೆಯಲ್ಲಿ ಟ್ರೈಪಾಡ್ ಹಾಕಿಕೊಂಡು ನಿಂತರು. ಆ ಹಕ್ಕಿ ಗೂಡು ಕಟ್ಟಿದ್ದ ಪೊಟರೆ ನಮ್ಮ ಕಣ್ಣಿನ ನೇರಕ್ಕೆ ದೂರದಲ್ಲಿ ಕಾಣುತ್ತಿತ್ತು. ಹೀಗೆ ಐ ಲೆವೆಲ್ ಪಾಯಿಂಟ್ ಛಾಯಾಗ್ರಾಹಕರಿಗೆ ಸಿಗೋದು ತುಂಬಾ ಅಪರೂಪ. ಇಪ್ಪತ್ತು ಮೂವತ್ತು ಅಡಿ ಎತ್ತರದ ಮರಗಳ ಮೇಲೆ ಗೂಡು ಕಟ್ಟುವ ಹಾರ್ನ್ ಬಿಲ್ ಸುಲಭಕ್ಕೆ ಕ್ಯಾಮೆರಾ ಕಣ್ಣಿನ ಸಮಕ್ಕೆ ಎಂದೂ ಸಿಗುವುದಿಲ್ಲ.

'ನೀವು ಕೂತವರು ಇನ್ನು ಅಲ್ಲಾಡುವಂತಿಲ್ಲ. ಮಾತಾಡುವಂತಿಲ್ಲ. ಒಂದು ಸಣ್ಣ ಚಲನೆ ಆದರೂ ಕೂಡ ಪಕ್ಷಿ ಹೆದರಿ ಬರುವುದೇ ಇಲ್ಲ. ಹೀಗಾಗಿ ತುಂಬಾ ಎಚ್ಚರಿಕೆಯಿಂದ ನೀವು ಇರಲೇಬೇಕು. ನಾನು ದೂರದಲ್ಲಿದ್ದು ಸುತ್ತಮುತ್ತ ತಿರುಗಾಡುತ್ತಾ ಗಮನಿಸುತ್ತೇನೆ. ಹಕ್ಕಿ ಬಂದರೆ ಈ ರೀತಿ ಸಿಳ್ಳಿನ ದನಿ ಮಾಡುತ್ತೇನೆ' ಎಂದು ವಿಷಲಿಂಗ್ ಥ್ರಶ್ ಹಕ್ಕಿಯಂತೆ ಇಂಪಾಗಿ ಕೂಗಿ ತೋರಿಸಿದ. ನಮ್ಮ ಲಗೇಜ್ ಹೊತ್ತು ಬಂದಿದ್ದ ಹುಡುಗರು ಸುಸ್ತಾಗಿ ದೂರ ಹೋಗಿ ನೆರಳಲ್ಲಿ ಮಲಗಿಬಿಟ್ಟರು.

ಸಖಿಗೆ ಹಣ್ಣುಗಳನ್ನು ತರಲು ಕಿಲೋಮೀಟರ್‌ಗಟ್ಟಲೆ ಹೋಗುವ ಗಂಡು ಹಾರ್ನ್ ಬಿಲ್ ಪಕ್ಷಿಯು ಪೊಟರೆಗೆ ಬರುವ ಮುನ್ನ ಸನಿಹದ ಮರದ ಮೇಲೆ ಕೂರುತ್ತದೆ. ತಾನು ಬಂದಿದ್ದೇನೆ ಎಂಬ ಕೂಗನ್ನು ಮೊದಲು ತನ್ನ ಇನಿಯಳ ಕಿವಿಗೆ ತಲುಪಿಸುತ್ತದೆ. ಆಗ ಮೊಟ್ಟೆಗಳ ಮೇಲೆ ಕಾವಿಗೆ ಕೂತ ಹೆಣ್ಣು ಹಕ್ಕಿ ಗಂಡಿನ ಧ್ವನಿ ಕೇಳಿದ ತಕ್ಷಣ ತನ್ನ ಕೊಕ್ಕನ್ನು ಆ ಸಣ್ಣ ಪೊಟರೆಯಿಂದ ಈಚೆಗೆ ಹಾಕುತ್ತದೆ. ಬಗೆಬಗೆಯ ಹಣ್ಣುಗಳನ್ನು ಗಂಟಲಲ್ಲಿ ತುಂಬಿಕೊಂಡು ಪೊಟರೆಯ ಬಳಿ ಹಾರಿ ಬಂದು ಕೂರುವ ಗಂಡು ಒಂದೊಂದೇ ಹಣ್ಣುಗಳನ್ನು ಗಂಟಲಿನಿಂದ ಹೆಕ್ಕಿ ತೆಗೆದು ಸಾವಕಾಶವಾಗಿ ಹೆಣ್ಣಿನ ಕೊಕ್ಕಿನ ತುದಿಗೆ ಮುಟ್ಟಿಸುತ್ತದೆ. ಮೊದಲ ಸುತ್ತಿನಲ್ಲಿ ಕಪ್ಪು ಹಣ್ಣುಗಳನ್ನು ಎರಡನೇ ಭೇಟಿಯಲ್ಲಿ ಕೆಂಪು ಹಣ್ಣುಗಳನ್ನು ತಂದು ತಿನ್ನಿಸಿತು. ಮಂಗಟ್ಟೆ ಹಕ್ಕಿಯ ಪ್ರೇಮ ಮತ್ತು ಕಾಳಜಿ ನೋಡಿ ಭಾವನೆಗಳು ಕಲಕಿ ಕಣ್ಣೀರು ಫಳಾರನೆ ಕೆನ್ನೆ ಮೇಲೆ ಧುಮುಕಿ ನಿಂತಿತು.

ಎಲ್ಲ ಮುಗಿಸಿಕೊಂಡು ವಾಪಸ್ಸು ಪರ್ವತ ಹತ್ತಿ ಬರುವಾಗ ನಮಗಿರುವ ಶಕ್ತಿ ಮತ್ತು ಮಿತಿಗಳು ಅರ್ಥವಾಗತೊಡಗಿದವು. ನಮ್ಮ ದೇಹವನ್ನು ಸುಖವಾಗಿ ಬೆಳೆಸಿಕೊಂಡ ತಪ್ಪಿಗೆ ಹೆಚ್ಚು ಬೆವರನ್ನು ಸುರಿಸಬೇಕಾಯಿತು. ಡಾ. ರಾಘವೇಂದ್ರ 'ಇಂಥ ಬೆಟ್ಟನಾ ಹತ್ತಿಳಿದು ದಕ್ಕಿಸಿಕೊಂಡಿದ್ದೀವಿ ಅಂದ್ರೆ ಸದ್ಯಕ್ಕೆ ನಮಗೆ ಹಾರ್ಟ್ ಪ್ರಾಬ್ಲೆಮ್ ಇಲ್ಲ ಅಂತ ಅರ್ಥ ಕಣ್ರೀ' ಎಂದು ಸಂಭ್ರಮದಿಂದ ಘೋಷಿಸಿದರು. ಇದೇ ಕಠಿಣ ರಸ್ತೆಯ ಮೂಲಕ ಇಳಿವ ಸ್ಥಳೀಯರು ಅಲ್ಲಲ್ಲಿ ಕೂತು ಸುಧಾರಿಸಿಕೊಳ್ಳುತ್ತಾ ಕೆಂಪು ನೀರು ಕುಡಿಯುತ್ತಿದ್ದರು. ನಾನು ಇವರೆಲ್ಲ ವಿಸ್ಕಿ ಕುಡಿಯುತ್ತಿದ್ದಾರೆ ಎಂದು ಭಾವಿಸಿದ್ದೆ. ಆಮೇಲೆ ಅದು ಟೀ ಸೊಪ್ಪು ಮತ್ತು ಹೂವಿನ ಪಕಳೆಗಳಿಂದ ಕುದಿಸಿದ ಕೆಂಪು ನೀರೆಂದೂ, ಆಗಾಗ ಕುಡಿಯುತ್ತಿದ್ದರೆ ಆಯಾಸ ಕಡಿಮೆಯಾಗುವುದೆಂದು ಹೇಳಿದರು.

ಪರ್ವತದ ತುದಿ ತಲುಪಿದ ಮೇಲೆ ಲಗೇಜ್ ಹೊತ್ತ ಹುಡುಗರ ಜೊತೆ ಒಂದು ಫೋಟೊ ತೆಗೆಸಿಕೊಳ್ಳುವುದಿತ್ತು. ಕರೆದೆ. ಅವರೆಲ್ಲ ಖುಷಿಯಾಗಿ ಬಂದು ನನ್ನೊಟ್ಟಿಗೆ ನಿಂತರು. ಸಲುಗೆಯಿಂದ ಆ ಹುಡುಗರ ಹೆಗಲ ಮೇಲೆ ನಾನು ಕೈ ಹಾಕಿ ಪಟ ತೆಗೆಸಿಕೊಂಡೆ. ಇದು ನನ್ನ ಎಂದಿನ ಅಭ್ಯಾಸ. ಆದರೆ ನನ್ನ ಬಲ ಭಾಗದಲ್ಲಿದ್ದ ಹುಡುಗನ ಹೆಗಲ ಮೇಲೆ ನಾನು ಕೈ ಹಾಕಿದ್ದು ಅವನಿಗೆ ಅಷ್ಟು ಇಷ್ಟವಾಗಲಿಲ್ಲ. ಆತ ಕೊಸರಾಡುತ್ತಿದ್ದ. ನನಗೂ ಯಾಕೆಂದು ಅರ್ಥವಾಗಲಿಲ್ಲ. ಬೆವರಿನ ವಾಸನೆಗೆ, ಇಲ್ಲವೇ ತೊಯ್ದ ಟೀ ಶರ್ಟಿನ ಕಸಿವಿಸಿಗೆ ಹೀಗೆ ಒದ್ದಾಡುತ್ತಿದ್ದಾನೆಂದು ಭಾವಿಸಿದೆ. 'ಯಾಕೆ ಹೀಗೆ ನುಲಿಯುತ್ತಿದ್ದೀಯ. ನಿನಗೆ ಇಷ್ಟವಿಲ್ಲದಿದ್ದರೆ ಹೆಗಲ ಮೇಲಿನ ಕೈ ತೆಗೆಯುತ್ತೇನೆ ಎಂದು ಕೇಳಿದೆ. ಈ ಮಾತಿಗೆ ಸುತ್ತಲಿದ್ದ ಸ್ಥಳೀಯರೆಲ್ಲ ಗೊಳ್ಳೆಂದು ನಕ್ಕರು. ನನಗೆ ಅವರ ನಗೆ ತುಂಬಾ ವಿಚಿತ್ರ ಎನಿಸಿತು. ಯಾಕೆ! ಏನಾಯ್ತು? ನನ್ನಿಂದ ಏನಾದರೂ ತಪ್ಪಾಯ್ತಾ?' ಎಂದು ಕೇಳಿದೆ. ಅವರು 'ಹಂಗೇನಿಲ್ಲ ಬಿಡಿ ಹಂಗೇನಿಲ್ಲ ಬಿಡಿ' ಎಂದು ತಲೆ ಆಡಿಸಿದರು. ನನ್ನ ಕುತೂಹಲ ಅಲ್ಲಿಗೆ ನಿಲ್ಲಲಿಲ್ಲ. ಅವರಿಗೆಲ್ಲ ಭಕ್ಷೀಸು ಕೊಟ್ಟು ಕಳಿಸುವಾಗ ಯಾಕೆ ಆ ಹುಡುಗ ಗುರಿಮಾಡಿ ನಗುತ್ತಿದ್ದೀರಿ. ಏನು ವಿಷಯ ಹೇಳಿ? ಎಂದೆ. ಆಗ ಅಲ್ಲಿದ್ದವರು 'ಸರ್ ನೀವು ನೀವು ಹೆಗಲ ಮೇಲೆ ಕೈ ಹಾಕಿದಾಗ ಕೊಸರಾಡಿದವನು ಹುಡುಗನಲ್ಲ. ಆಕೆ ಹುಡುಗಿ. ಹೆಸರು ಬುಲ್ ಬುಲ್ ಅಂತ. ಆದರೆ ಅವಳು